


ಇನ್‌ಸ್ಟಾಗ್ರಾಂ ಬಯೋ ಗಮ್ಮತ್ತಾಗಿರುತ್ತಿತ್ತು. **I am Siddant, because of this country** ಎನ್ನುವ ಸಾಲು ಅದರಲ್ಲಿ ಸೇರಿತ್ತು. ಸಾಮಾಜಿಕ ಕಾಳಜಿಯ ಅನೇಕ ಸ್ಟೋರಿಗಳನ್ನು ಅವನು ಆಗಾಗ ಅಪ್‌ಲೋಡ್ ಮಾಡುತ್ತಿದ್ದ. ಸಮಾಜದ ಒಳಿತಿಗಾಗಿ ದುಡಿಯಬೇಕು ಎನ್ನುವ ಆಶಯವೂ ಅದರಲ್ಲಿ ಸೇರಿತ್ತು. ಆದರೆ ಕೆಲವೇ ವರ್ಷಗಳಲ್ಲಿ ಅವನ ಮಾತುಗಳಲ್ಲಿ ಹತಾಶೆ ಸೇರಿಕೊಂಡು, ಅಪ್‌ಲೋಡ್ ಮಾಡಿದ ಸ್ಟೋರಿಗಳಲ್ಲೆಲ್ಲ ಕುಹಕದ ಎಳೆಯೊಂದು ಇಣುಕಲಾರಂಭಿಸಿತು. ಮತ್ತೊಂದು ವರ್ಷದಲ್ಲಿ ಈ ಹತಾಶೆಯು ತೀವ್ರವಾದ ಸಿಟ್ಟಾಗಿ ಬದಲಾಗಿ, ಅಪ್‌ಲೋಡ್ ಮಾಡುವ ಎಲ್ಲ ಸ್ಟೋರಿಗಳೂ ಯಾರನ್ನೋ ಉದ್ದೇಶಿಸಿ, ಅಥವಾ ಯಾರನ್ನೋ ಟೀಕಿಸಿ ಅದೂ ಅಲ್ಲದೇ ಹೋದರೆ ಯಾರನ್ನೋ ನಿಂದಿಸುವ ಉದ್ದೇಶದಿಂದಲೇ ಇರುತ್ತಿದ್ದವು. ಕಚೇರಿಯಲ್ಲಿ ಬಯೋಡೇಟಾ ಹಿಡಿದು ಕುಳಿತ ಆಯ್ಕೆ ಸಮಿತಿಯ ಸಿಬ್ಬಂದಿ, ಸಿದ್ಧಾಂತ್‌ನ ಈ ಬದಲಾವಣೆಯನ್ನು ಗಮನಿಸಿ ಷರಾ ಬರೆದರು. ಆದರೆ ಈ ಷರಾವನ್ನು ಯಾರೋ ಬರೆಯಬೇಕಾಗಿಲ್ಲ. ಆಗಾಗ ನಮ್ಮದೇ ಅಕೌಂಟ್‌ಗಳಿಗೆ ಭೇಟಿ ಕೊಟ್ಟು, ಅಕೌಂಟ್‌ಗಳ ಇತಿಹಾಸವನ್ನು ಗಮನಿಸಿದರೆ, ನಮ್ಮ ವೈಯಕ್ತಿಕ ಧೋರಣೆ ಹೇಗೆ ಬದಲಾಗಿದೆ ಎಂಬುದನ್ನು ನಾವೇ ಗಮನಿಸಬಹುದು. ಅದೊಂಥರಾ ವ್ಯಕ್ತಿತ್ವದ ಸ್ವಯಂ ಮೌಲ್ಯಮಾಪನ ಎಂದರೂ ಸರಿಯೇ.

ಒಬ್ಬ ವ್ಯಕ್ತಿ ಸಾಮಾಜಿಕಜಾಲತಾಣದಲ್ಲಿ ಹೇಗೆ ವರ್ತಿಸುತ್ತಾನೆ ಎನ್ನುವುದು ಆ ವ್ಯಕ್ತಿಯ ವ್ಯಕ್ತಿತ್ವವನ್ನೂ ಸೂಚಿಸುವ ಮಾಪನವಾಗಿದೆ. ಅಂದರೆ, 'ನಿಮ್ಮ ಗೋಡೆ ಎಷ್ಟು ಸ್ವಚ್ಛವಾಗಿದೆ' ಎಂದು ನೋಡಿಕೊಳ್ಳುವ ಜವಾಬ್ದಾರಿ ಈ